# ವಿದ್ಯೆ: ಮಾನವನಲ್ಲಿನ ಪರಿಪೂರ್ಣತೆಯ ಅಭಿವ್ಯಕ್ತಿ

**ಸ್ವಾಮಿ ಆತ್ಮವಿದಾನಂದ**

## ಪರಿಪೂರ್ಣತೆ ಎಂದರೇನು?

"ಮನುಷ್ಯನಲ್ಲಿ ಈಗಾಗಲೇ ಪರಿಪೂರ್ಣತೆ ಇದೆ" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಈ ಹೇಳಿಕೆಯ ವ್ಯಾಪ್ತಿಯನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮೊದಲು ಮಾಡೋಣ. ಪರಮಸತ್ಯವನ್ನು **ಸತ್, ಚಿತ್ ಮತ್ತು ಆನಂದ** ಅಂದರೆ **ಅನಂತ ಅಸ್ತಿತ್ವ, ಜ್ಞಾನ ಮತ್ತು ಸಂತೋಷ** ಎಂದು ಉಪನಿಷತ್ತುಗಳಲ್ಲಿ ವರ್ಣಿಸಲಾಗಿದೆ. ಮಾನವನು ಪರಮಸತ್ಯದ ಪ್ರಮುಖವಾದ ಅಭಿವ್ಯಕ್ತಿ. ಆದ್ದರಿಂದ, ಈ ಮೂರು ಲಕ್ಷಣಗಳೂ ಅವನಲ್ಲಿ ಪೂರ್ಣಪ್ರಮಾಣದಲ್ಲಿರಬೇಕು. ಯಾವಾಗ ಈ ಪರಮಸತ್ಯದ ಸ್ಪರ್ಶ ನಮಗಾಗುವುದೋ ಆಗ ಮೇಲಿನ ಪರಿಪೂರ್ಣತೆಯ ಲಕ್ಷಣಗಳ ಸಂಸರ್ಗವೂ ನಮಗಾಗುತ್ತದೆ.

ಆಧುನಿಕ ವಿಜ್ಞಾನದ ಒಂದು ಉದಾಹರಣೆಯ ಮೂಲಕ ಮೇಲಿನ ವಿಚಾರವನ್ನು ತಿಳಿದುಕೊಳ್ಳಬಹುದು. ನಿರ್ದಿಷ್ಟ ದೈಹಿಕ ಕೆಲಸಗಳನ್ನು ಮಾಡುವಾಗ, ಅವುಗಳಿಗೆ ಬೇಕಾಗುವ ಸಂಕೇತಗಳು ಮಾತ್ರ ಜಾಗ್ರತವಾಗಿ ಕೆಲವು ಕೋಶಗಳು ಕೆಲಸಮಾಡುತ್ತವೆ; ಇನ್ನುಳಿದ ಕೋಶಗಳಲ್ಲಿನ ಸಂಕೇತಗಳು ಸುಪ್ತವಾಗಿರುತ್ತವೆ. ಆದರೆ, ಮನುಷ್ಯನ ದೇಹದ ಒಂದು ಕೋಶವಾದ ಜಿನೋಮ್‌ನಲ್ಲಿ (Genome) ಆದಿ ಮಾನವನಿಂದ ಹಿಡಿದು ಆಧುನಿಕ ಮಾನವನ ತನಕ ವಿಕಸನಗೊಂಡ ಎಲ್ಲಾ ವೈಲಕ್ಷಣ್ಯಗಳ ಸಂಕೇತಗಳು ಇವೆ ಎಂದು ಆಧುನಿಕ ಜೀವವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಈ ಜಿನೋಮ್ ಕೋಶವನ್ನು ಸೂಕ್ಷ್ಮವಾಗಿ ಮಾರ್ಪಡಿಸಿ, ನಾವು ಬಯಸುವ ಗುಣಗಳಿಂದ ಕೂಡಿದ ಒಬ್ಬ ಮಾನವನ ದೇಹವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ಅವರು ಇತ್ತೀಚೆಗೆ ಹೇಳುತ್ತಿದ್ದಾರೆ.

**ಜಿನೋಮ್ ಅಂದರೆ ಏನು?**

ಜಿನೋಮ್ ಎಂದರೆ, ಡಿ.ಎನ್.ಎ. ಯಲ್ಲಿ ಸಂಗ್ರಹವಾಗಿರುವ ತಲೆತಲಾಂತರದಿಂದ ಬಂದ ಮಾಹಿತಿಗಳ ಕೇಂದ್ರ, ಮಾನವ ಜಿನೋಮ್ ಅನ್ನು ಒಂದು ಪುಸ್ತಕ ಎಂದು ಊಹಿಸಿಕೊಂಡರೆ, ೧. ಆ ಪುಸ್ತಕದಲ್ಲಿ, ೧,೦೦೦ ಲಕ್ಷ (ಒಂದು ಬಿಲಿಯನ್) ಪದಗಳಿರುತ್ತವೆ. ೨. ಅದು ಪ್ರತಿಯೊಂದೂ ೩೦೦ ಪುಟಗಳಿರುವ ೫,೦೦೦ ಸಂಪುಟಗಳಲ್ಲಿರುತ್ತದೆ. ೩. ಅದು ಒಂದು ಪಿನ್ನಿನ ತುದಿಯಷ್ಟಿರುವ ಜೀವಕೋಶದೊಳಗೆ ನುಸುಳಬಲ್ಲುದಾಗಿರುತ್ತದೆ. ೪. ಈ ಪುಸ್ತಕದ (ಎಲ್ಲ ೫೦೦೦ ಸಂಪುಟಗಳೂ ಕೂಡ) ಪ್ರತಿಯೊಂದು ಜೀವಕೋಶದಲ್ಲಿಯೂ, ಎರಡು ಮೈಲಿ ಉದ್ದವಿರುವ ಡಿ.ಎನ್.ಎ. ನ ಒಂದು ಅಂಗವಾಗಿ ಇರುತ್ತದೆ. ( ಕೆಂಪು ರಕ್ತಕಣಗಳನ್ನು ಬಿಟ್ಟು) — *ಇಂಟರ್‌ನೆಟ್ 'ವಿಕಿಪಿಡಿಯಾ' ದಿಂದ*

**'ಪೂರ್ಣಮದಃ ಪೂರ್ಣಮಿದಂ'** ಮುಂತಾದ ಉಪನಿಷದ್ ವಾಕ್ಯಗಳಲ್ಲಿ ಹೇಳಲಾಗಿರುವ 'ನಮಗೆ ಕಾಣಿಸುತ್ತಿರುವುದು ತೋರಿಬರುವ ಪರಮ ಸತ್ಯದ ಒಂದು ಭಾಗ ಮಾತ್ರ; ಪರಿಪೂರ್ಣವಾದ ಪರಮ ಸತ್ಯ ಇನ್ನೂ ಅಗೋಚರವಾಗಿದೆ' ಎಂಬ ವಿಷಯವನ್ನೇ ಈ ನಿದರ್ಶನವೂ ಪ್ರತಿಪಾದಿಸುತ್ತಿದೆ. ಒಂದು ಜೀವಕೋಶದಲ್ಲಿ ಸುಪ್ತವಾಗಿರುವ ಒಬ್ಬ ಮನುಷ್ಯನ ಲಕ್ಷಣಗಳನ್ನು ಪೂರ್ಣವಾಗಿ ವ್ಯಕ್ತಗೊಳಿಸಿ, ಹೊಸ ಮಾನವನನ್ನು ಪಡೆಯಲು ಭೌತಿಕ ಹಂತದಲ್ಲಿ ವಿಜ್ಞಾನಿಗಳಿಂದ ಸಾಧ್ಯವಾಗುವ ಹಾಗಿದ್ದರೆ, ಆಧ್ಯಾತ್ಮಿಕ ಹಂತದಲ್ಲಿ, ಪ್ರತಿ ವಿದ್ಯಾರ್ಥಿಯ ಪ್ರಜ್ಞೆಯಲ್ಲಿಯೂ ಸುಪ್ತವಾಗಿರುವ ಅನಂತ ಜ್ಞಾನ ಮತ್ತು ಪರಿಪೂರ್ಣತೆಯನ್ನು ಸರಿಯಾದ ವಿದ್ಯೆಯಿಂದ ಪ್ರಕಾಶಪಡಿಸಬಹುದಲ್ಲವೇ? ಇದೇ ಸ್ವಾಮೀಜಿಯವರ ಹೇಳಿಕೆಯ ಹಿಂದಿರುವ ಸ್ವಾರಸ್ಯ.

ಖಾಲಿ ಇರುವ ಮೆದುಳಿಗೆ ಹೊರಗಿನಿಂದ ಮಾಹಿತಿಗಳನ್ನು ತುಂಬುವುದು ವಿದ್ಯೆಯೆನಿಸುವುದಿಲ್ಲ. ವಿದ್ಯಾರ್ಥಿಯ ಅಂತರಂಗದಲ್ಲಿ ಈಗಾಗಲೇ ಸುಪ್ತವಾಗಿರುವ ಸಾಮರ್ಥ್ಯವನ್ನು ಹೊರತರುವುದೇ ವಿದ್ಯೆ ಎಂದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ಜೆ. ಎಫ್. ಹರ್‌ಬರ್ಟ್ (ಜರ್ಮನಿಯ ತತ್ತ್ವಶಾಸ್ತ್ರಜ್ಞ), ಫ್ರೋಯಿಬೆಲ್, ಪೆಸ್ಟೋಲೊಕ್ಕಿ, ಮಾರಿಯಾ ಮಾಂಟೆಸರಿ, ಜಾನ್ ಡ್ಯೂಯಿ ಮುಂತಾದ ಪರಿಣತ ಮನೋವಿಜ್ಞಾನಿಗಳ ಮತ್ತು ಶಿಕ್ಷಣತಜ್ಞರ ಅಭಿಪ್ರಾಯ ಮತ್ತು ಅನುಭವ ಕೂಡ ಇದೇ ಆಗಿದೆ.

## ಸಾಮರ್ಥ್ಯ ವ್ಯಕ್ತಪಡಿಸುವ ಹಂತಗಳು

ಈಗ ಈ ಮೇಲಿನ ಸಿದ್ಧಾಂತವನ್ನು ಪ್ರಾಯೋಗಿಕ ದೃಷ್ಟಿಯಿಂದ ಪರಿಶೀಲನೆ ಮಾಡೋಣ. ಮಾನವ ಇತಿಹಾಸದಲ್ಲಿ ಪರಿಪೂರ್ಣತೆ ವಿಕಸನ ಹೊಂದುವ ಮೂರು ಹಂತಗಳಿವೆ.

೧. ತಾನು ಮತ್ತು ತನ್ನ ಕುಲದವರ ಆತ್ಮರಕ್ಷಣೆಯೇ ಶಿಲಾಯುಗದ ಕಾಲದಿಂದಲೂ ಮಾನವನ ಅತಿ ಮುಖ್ಯವಾದ ಮೂಲಭೂತ ಸಹಜ ಪ್ರವೃತ್ತಿಯಾಗಿತ್ತು. ಪ್ರತಿಯೊಬ್ಬನಿಗೂ ತನ್ನ ಆತ್ಮರಕ್ಷಣೆಯೇ ಮೊದಲ ಕಾಳಜಿಯಾಗಿತ್ತು. ಬೆಂಕಿ, ಕೃಷಿ ವಿಧಾನ, ಜೀವನೋಪಯೋಗಿ ಉಪಕರಣಗಳು, ಗಾಳಿಯಂತ್ರ ಮುಂತಾದ ಆದಿಕಾಲದ ಅನ್ವೇಷಣೆಗಳಿಂದ ಹಿಡಿದು ಇಲ್ಲಿಯ ತನಕ ಯಾವ ಯಾವ ಅನ್ವೇಷಣೆಯ ಬೆಳವಣಿಗೆಗಳು ನಡೆದಿವೆಯೋ, ಅವುಗಳ ಜ್ಞಾನವು ಮಾನವರಲ್ಲಿ ಅವುಗಳ ಅನ್ವೇಷಣೆಯ ಕಾಲಕ್ಕೆ ಮುಂಚೆಯೇ ಸುಪ್ತವಾಗಿತ್ತು. ಒಂದು ಸಂದರ್ಭ, ಸೂಚನೆ ಅಥವಾ ಸವಾಲು ಒದಗಿ ಬಂದಾಗ, ಇವು ಹೊರಗೆ ಕಾಣಿಸಿಕೊಂಡವು. ಹೀಗೆ ಸಾವಿರಾರು ವರ್ಷಗಳ ಕಾಲ ಮನುಷ್ಯನು ತನ್ನ ಆತ್ಮರಕ್ಷಣೆಯ ಉಪಾಯಗಳನ್ನು ಕಂಡುಹಿಡಿಯುವಲ್ಲಿಯೇ ಕಾರ್ಯನಿರತನಾಗಿದ್ದನು.

೨. ಈ ಬಗೆಯ ಆತ್ಮರಕ್ಷಣೆಯ ಹೋರಾಟದಲ್ಲಿ ಒಂದು ಸ್ಥಿರತೆಯನ್ನು ಪಡೆದ ನಂತರ ಮನುಷ್ಯ ಸುಧಾರಿತ ಜೀವನಶೈಲಿ, ಕಲೆ, ಸಂಸ್ಕೃತಿ ಮುಂತಾದ ಅದಕ್ಕಿಂತಲೂ ಉತ್ಕೃಷ್ಟ ವಿಷಯ

ಗಳ ಕಡೆ ಗಮನ ಹರಿಸುತ್ತಿದ್ದಾನೆ. ಇವುಗಳೂ ಕೂಡ ಮಾನವ ಪ್ರಜ್ಞೆಯಲ್ಲಿ ಸುಪ್ತವಾಗಿವೆ. ಅವು ಅಭಿವ್ಯಕ್ತವಾಗಲು ಹೊರಗಿನ ಒಂದು ಸಾಧಾರಣ ಪ್ರಚೋದನೆ ಸಾಕು.

೩. **ಆತ್ಮರಕ್ಷಣೆ** ಮತ್ತು **ಸೌಖ್ಯಜೀವನ** ಎಂಬ ಬದುಕಿನ ಎರಡು ಪ್ರಮುಖ ಮೈಲಿಗಲ್ಲುಗಳನ್ನು ದಾಟಿದನಂತರ ಮನುಷ್ಯ ತನ್ನ ಬಾಳಿನ ಅರ್ಥವನ್ನು ಹುಡುಕತೊಡಗುತ್ತಾನೆ. ಈ ಆಂತರಂಗಿಕ ತುಡಿತ ಅವನನ್ನು ಅಂತರ್ಮುಖಿಯನ್ನಾಗಿ ಮಾಡಿ, ಅವನನ್ನು ಆಧ್ಯಾತ್ಮಿಕ ವಿಕಾಸದ ಕಡೆಗೆ ಒಯ್ಯುತ್ತದೆ. ಈ ವಿಕಾಸ ಒಬ್ಬ ಗುರುವಿನ ಮಾರ್ಗದರ್ಶನದ ಮೂಲಕ, ತನಗೆ ತಾನೇ ಅಥವಾ ಆತ್ಮಾನುಸಂಧಾನದ ಮೂಲಕ ಆಗ ಬಹುದು.

### ಮಾನವ ಜೀವಿತದಲ್ಲಿ ಪರಿಪೂರ್ಣತೆಯ ಅಭಿವ್ಯಕ್ತಿ

ಮಾನವ ಇತಿಹಾಸದ ಈ ವಿಕಾಸ ಪ್ರಕ್ರಿಯೆಯೇ ಒಬ್ಬ ಮನುಷ್ಯನ ಜೀವಿತಕಾಲದಲ್ಲಿಯೂ ವ್ಯಷ್ಟಿರೂಪದಲ್ಲಿ ನಡೆಯುವುದನ್ನು ನಾವು ಕಾಣಬಹುದಾಗಿದೆ. ಸರಿಯಾದ ಪ್ರೇರಣೆ ದೊರಕಿದರೆ ಜನ್ಮಾಂತರದಿಂದ ಮತ್ತು ತಲೆತಲಾಂತರದಿಂದ ಸಂವಹನಗೊಂಡು ಒಬ್ಬನಲ್ಲಿ ಸುಪ್ತವಾಗಿರುವ ಪರಿಪೂರ್ಣತೆ ಕೂಡ ನಿಧಾನವಾಗಿ ಅಭಿವ್ಯಕ್ತವಾಗುತ್ತದೆ. ಈ ವಿಕಾಸದಲ್ಲಿ ಕೂಡ ಹಲವಾರು ಹಂತಗಳಿದ್ದು, ಒಬ್ಬ ವ್ಯಕ್ತಿ ಸದ್ಯ ಯಾವುದೇ ಹಂತದಲ್ಲಿ ಇರಬಹುದು. ಇದರಿಂದ ಮನುಷ್ಯನಲ್ಲಿ ಈಗಾಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿ ಸಾಧ್ಯ ಎನ್ನುವುದು ನಮಗೆ ಸ್ಪಷ್ಟವಾಗುತ್ತದೆ.

ಜೀವನ ನಿರ್ವಹಣೆಗಾಗಿ ಪ್ರಯತ್ನಪಡುತ್ತಿರುವ ಮನುಷ್ಯನ ವಿದ್ಯೆ ಮತ್ತು ಪರಿಪೂರ್ಣತೆಯ ಅಭಿವ್ಯಕ್ತಿ, ಆಹಾರ, ವಸ್ತ್ರ ಮತ್ತು ವಸತಿಯನ್ನು ಸಂಪಾದಿಸಲು ಮಾತ್ರವೇ ಸೀಮಿತವಾಗಿರುತ್ತದೆ. ಆದರೆ ಸರಿಯಾದ ಶಿಕ್ಷಣದ ಮೂಲಕ ಅವನು ಕಲೆ, ಸಂಸ್ಕೃತಿ ಮತ್ತು ನಂತರ, ಆಧ್ಯಾತ್ಮಿಕ ಪ್ರಗತಿಯ ದಾರಿಯಲ್ಲಿ ಮುಂದುವರಿಯುತ್ತಾನೆ.

ಪ್ರತಿಯೊಂದು ಹಂತದಲ್ಲಿಯೂ ಸರಿಯಾದ ಶಿಕ್ಷಣ ದೊರೆಯಬೇಕಾದುದು ಅಗತ್ಯ. ಅದಿಲ್ಲದ ಒಬ್ಬ ಬಡವನಿಗೆ ಅಪಾರ ಸಂಪತ್ತು ದೊರೆತರೆ ಅವನು ಅದನ್ನು ಪೋಲು ಮಾಡುತ್ತಾನೆ. ಹಾಗೆಯೇ ಅಲ್ಪಸ್ವಲ್ಪ ಬೌದ್ಧಿಕ ವಿಕಾಸ ಹೊಂದಿದ ಮನುಷ್ಯ, ತನ್ನ ಜೀವನದ ನಿಜವಾದ ಉದ್ದೇಶವನ್ನು ತಿಳಿಯದಿದ್ದರೆ, ಭೋಗಿಯಾಗುತ್ತಾನೆ. ಮುಂದುವರೆದ ದೇಶಗಳಲ್ಲಿ ಸಂಪತ್ತಿದ್ದರೂ ಸ್ವೇಚ್ಛಾಶೈಲಿಯ ಜೀವನ, ಹೆಚ್ಚಿನ ಅಪರಾಧಗಳು ಹೆಚ್ಚುತ್ತಿರುವುದು, ಅಲ್ಲಿನ ಜನರಲ್ಲಿ ಆಧ್ಯಾತ್ಮಿಕ ವಿಕಾಸವಾಗಿಲ್ಲ ಎನ್ನುವುದಕ್ಕೆ ನಿದರ್ಶನವಾಗಿದೆ.

### ವಿದ್ಯೆಯ ಮಹತ್ವ

ಹೊಟ್ಟೆಪಾಡಿನ ಜೀವನೋಪಾಯ ಸಂಪಾದನೆ ಎಂಬ ಮೊದಲನೇ ಹಂತಕ್ಕೆ ಮಾತ್ರ ಇವತ್ತಿನ ಶಿಕ್ಷಣದ ವ್ಯವಸ್ಥೆ ಸೀಮಿತವಾಗಿದೆ. ಮಾಹಿತಿಗಳನ್ನು ಕಲೆಹಾಕಲು (assimilation) ಮತ್ತು ಅರಗಿಸಿಕೊಳ್ಳಲು (internalization) ಅವಕಾಶ ಕೊಡದೆ ಅವನ್ನು ಬಲವಂತವಾಗಿ ವಿದ್ಯಾರ್ಥಿಯ ಮೆದುಳಿನ ಒಳಗೆ ತುರುಕಲಾಗುತ್ತಿದೆ. ಅವು ಉನ್ನತ ಮಟ್ಟದ ಸಾಮರ್ಥ್ಯದ ಗಳಿಕೆಗೆ ಯಾವ ಪ್ರೇರಣೆಯನ್ನೂ ವಿದ್ಯಾರ್ಥಿಗೆ ಕೊಡುವುದಿಲ್ಲ. ಈ ಪರಿಸ್ಥಿತಿಯನ್ನು ಎಲ್ಲ ಬಗೆಯ ಸಾಂಸ್ಕೃತಿಕ, ನೈತಿಕ ಮತ್ತು ಆಧ್ಯಾತ್ಮಿಕ ಹಿನ್ನೆಲೆಗಳಿರುವ ಜನರಿಗೆ, ಆಧ್ಯಾತ್ಮಿಕ ಪ್ರೇರಣೆ ಕೊಡುವ ಶಿಕ್ಷಣ ಪದ್ಧತಿಯಿಂದ ಮಾತ್ರವೇ ಸುಧಾರಿಸಬಹುದು.

ಈ ಪ್ರಕ್ರಿಯೆಯಲ್ಲಿ ಶಿಕ್ಷಕರು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಅವರು ತಮ್ಮ ಉತ್ತಮ ನಡತೆಯಿಂದ ವಿದ್ಯಾರ್ಥಿಗೆ ಮಾದರಿಯಾಗಿ ಬದುಕಬೇಕು. ಅದಲ್ಲದೆ, ವಿದ್ಯಾರ್ಥಿಗಳು ಉದಾತ್ತ ವಿಚಾರಗಳನ್ನು ಸುಲಭವಾಗಿ ಸ್ವೀಕರಿಸಲು, ಅಳವಡಿಸಿಕೊಳ್ಳಲು ಶಿಕ್ಷಕರು ಅವಕಾಶ ಕಲ್ಪಿಸಿಕೊಡಬೇಕು. ಮೇಲಿನ ಕರ್ತವ್ಯಗಳನ್ನು ಪಾಲಿಸದೆ, ಬರಿ ಮಾಹಿತಿಗಳನ್ನು ಪೂರೈಕೆ ಮಾಡಿದರೆ ಶಿಕ್ಷಣ ಬರಡಾಗುತ್ತದೆ.

ಪ್ರಾಥಮಿಕ ವಿದ್ಯಾಭ್ಯಾಸದಿಂದ ಬ್ರಹ್ಮವಿದ್ಯೆಯ ತನಕ ಎಲ್ಲ ಹಂತದಲ್ಲಿಯೂ ಎಲ್ಲ ಕಾಲದಲ್ಲಿಯೂ ವಿದ್ಯಾರ್ಥಿಗಳಿಗೆ ಸರಿಯಾದ ವಾತಾವರಣ ನಿರ್ಮಿಸಿಕೊಟ್ಟು ಪ್ರೇರೇಪಿಸುವ ಕೇಂದ್ರ ವ್ಯಕ್ತಿಯೇ ಗುರು. ಅದರಿಂದಲೇ ಭಾರತೀಯರು ಬಹಳ ಗೌರವದಿಂದ 'ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಮಹೇಶ್ವರ' ಎಂದು ಪ್ರಾರ್ಥನೆ ಮಾಡುವರು. ❀

ಈ ಜ್ಞಾನವೆಂಬುದು ಮನುಷ್ಯನಲ್ಲಿಯೇ ಅಡಗಿರುವುದು. ಹೊರಗಿನಿಂದ ಯಾವ ಜ್ಞಾನವೂ ಬರುವುದಿಲ್ಲ. ಅದೆಲ್ಲವೂ ಒಳಗೇ ಇರುವುದು... ನ್ಯೂಟನ್ನನು ಗುರುತ್ವಾಕರ್ಷಣವನ್ನು ಕಂಡುಹಿಡಿದನೆಂದು ನಾವು ಹೇಳುತ್ತೇವಲ್ಲವೇ? ಅದೇನು ಎಲ್ಲಿಯೋ ಒಂದು ಮೂಲೆಯಲ್ಲಿ ಕುಳಿತುಕೊಂಡು ನ್ಯೂಟನ್ನನು ತನ್ನನ್ನು ಕಂಡುಹಿಡಿಯುವುದಕ್ಕೆ ಬರುವನೆಂದು ಕಾಯುತ್ತಿದ್ದಿತೇನು? ಅದು ಆತನ ಮನಸ್ಸಿನಲ್ಲಿಯೇ ಇದ್ದಿತು, ಸಮಯ ಬಂದಿತು, ಆಗ ಅದು ಬಯಲಾಯಿತು, ಎಂದರೆ ಆತನಿಗೆ ಜ್ಞಾನ ಹೊಳೆಯಿತು. ಜಗತ್ತು ಗಳಿಸಿರುವ ಜ್ಞಾನವೆಲ್ಲವೂ ಮನಸ್ಸಿನಿಂದ ಬಂದುದೇ. ಜಗತ್ತಿನ ಅನಂತ ಪುಸ್ತಕ ಭಂಡಾರವೆಲ್ಲ ನಿಮ್ಮ ಮನಸ್ಸಿನಲ್ಲಿಯೇ ಇದೆ. ಬಾಹ್ಯ ಪ್ರಪಂಚವೆಂಬುದು ಸೂಚನೆ ಮಾತ್ರ, ಅದು ನಿಮ್ಮ ಮನಸ್ಸನ್ನು ವಿಚಾರ ಮಾಡುವಂತೆ ಪ್ರೇರೇಪಿಸುವುದು.

—ಸ್ವಾಮಿ ವಿವೇಕಾನಂದ (ಕೃ.ಶ್ರೇ.೧. ೨೯, ೩೦)

ಒಬ್ಬ ಬಲೂನು ಮಾರುವವನಿದ್ದ. ಅವನ ಹತ್ತಿರ ಹತ್ತಾರು ಬಣ್ಣಗಳ ಬಲೂನುಗಳಿದ್ದವು. ಅದನ್ನು ಹಾರಿಸಿ ತೋರಿಸುತ್ತಿದ್ದ. ಆಗ ಒಂದು ಮಗು ಅವನ ಶರ್ಟನ್ನು ಜಗಿದು ಎಳೆಯಿತು. "ಕಪ್ಪು ಬಲೂನು ಕೂಡ ಹಾರುತ್ತದೆಯಾ? ನೀವು ಬರೀ ಬಣ್ಣದ ಬಲೂನುಗಳನ್ನು ಮಾತ್ರ ಹಾರಿಸುತ್ತಿದ್ದೀರಲ್ಲಾ" ಎಂದು ಕೇಳಿತು. ಅದಕ್ಕೆ ಅವನು ಹೇಳಿದ್ದು ಇಷ್ಟು: "ಮಗೂ, ಹಾರುವುದಕ್ಕೆ ಬಲೂನಿನ ಬಣ್ಣ ಮುಖ್ಯ ಅಲ್ಲ. ಅದರೊಳಗೆ ಗಾಳಿ ಇದೆಯೇ ಇಲ್ಲವೇ ಎಂಬುದು ಮುಖ್ಯ." *ಅದೇ ರೀತಿ ವ್ಯಕ್ತಿಯೊಬ್ಬನಲ್ಲಿ ಅಂತರ್ಗತವಾಗಿರುವ ಶಕ್ತಿ ಮುಖ್ಯವೇ ಹೊರತು, ಅವನ ಬಾಹ್ಯ ತೋರಿಕೆಗಳಲ್ಲ.*